ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಇಲ್ಲ

ಆ) ' ಅ ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ನಿಲುಗಡೆ ಆಗುತ್ತಿರುವ ಬಗ್ಗೆ.

೮೫೩. ಶ್ರೀ ನಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ಆಗುವ ವಿದ್ಯುತ್ ನಿಲುಗಡೆಗೆ ಕಾರಣ ವೇನು ?

ಆ) ವಿದ್ಯುತ್ ನಿಲುಗಡೆಯಿಂದಾಗಿ ರೈತರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ರಾಜ್ಯದಾದ್ಯಂತ ನಿಯಮಿತ ಆವಧಿಯ ಲೋಡ್ ಷೆಡ್ಡಿಂಗ್ ಮಾಡುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ವಿದ್ಯುತ್ ನಿಲುಗಡೆ ಆಗುತ್ತಿದೆ.

ಆ) ಈ ಲೋಡ್ ಷೆಡ್ಡಿಂಗ್ ಇದ್ದರೂ ರೈತರಿಗೆ ದಿನದಲ್ಲಿ ೧೭ ಘಂಟೆಗಳ ಕಾಲವೂ ದಿನದ ಹಗಲಿನಲ್ಲಿ ೬ ಘಂಟೆಗಳ ಕಾಲವೂ ಸತತ ವಿದ್ಯುತ್ ಪೂರೈಕೆ ಇರುವುದು ಲೋಡ್ ಷೆಡ್ಡಿಂಗ್ ಅನಿವಾರ್ಯವಾದುದರಿಂದ ಇದನ್ನು ತೊಂದರೆ ಎಂದು ಭಾವಿಸಲಾಗುವುದಿಲ್ಲ.

ಇ) ಲೋಡ್ ಷೆಡ್ಡಿಂಗ್ ಅನಿವಾರ್ಯ ಮತ್ತು ಅತ್ಯಗತ್ಯವಾದುದರಿಂದ ಜನರಿಗೆ ತರಲಾಗಿರುವ ನಿಯಮಿತ ವೇಳೆಯನ್ನು ಎಲ್ಲಾ ವಿಷಯ ಪರಿಶೀಲಿಸಿ ನಿಗದಿ ಮಾಡಲಾಗಿದೆ. ಇದನ್ನು ನಿಲ್ಲಿಸಲು ಹಾಲಿ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಪೀಕ್ ಲೋಡ್ ಸ್ಥಿತಿ ಸುಧಾರಣೆಗೆ ಸ್ಟೇಷನ್ನುಗಳ ಓವರ್ ಲೋಡು ತಪ್ಪಿಸಲು ಅನೇಕ ಕ್ರಮ ಕೈಗೊಳ್ಳಲಾಗಿದೆ. ಅಗತ್ಯ ಕಂಡು ಬಂದ ಕಡೆಗಳಲ್ಲೆಲ್ಲಾ ಹಾಲಿ ಇರುವ ಸ್ಟೇಷನ್ನಿನ ಸಾಮರ್ಥ್ಯ ಹೆಚ್ಚಿಸಲಾಗುತ್ತಿದೆ. ಹೊಸ ಹೊಸ ಸ್ಟೇಷನ್ನುಗಳನ್ನು ಲೋಡು ಹತ್ತಿರ ಅಥವಾ ಲೋಡು ಸಾಂದ್ರತೆ ಇರುವಲ್ಲಿ ಸ್ಥಾಪಿಸಲಾಗುತ್ತಿದೆ. ಹೊಸ ವಿದ್ಯುತ್ ಮಾರ್ಗ ಹಾಕಲಾಗುತ್ತಿದೆ, ಇರುವ ವಿದ್ಯುತ್ ಮಾರ್ಗಗಳ ತಂತಿಗಳನ್ನು ಬಲಪಡಿಸಲಾಗುತ್ತಿದೆ (ಹೆಚ್ಚಿನ ಗಾತ್ರದ ತಂತಿಗಳನ್ನು ಹಾಕಿ ಹಳೆಯದನ್ನು ತೆಗೆಯಲಾಗುತ್ತದೆ) ವಿದ್ಯುತ್ ಉತ್ಪಾದನೆ ಹೆಚ್ಚಿಸಲೂ ಕ್ರಮ ಕೈಗೊಳ್ಳಲಾಗಿದೆ,

ದಿನಾಂಕ ೩೧-೩-೧೯೮೯ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು (೧೪ ನೇ ಪಟ್ಟಿ)

ತಮಿಳುನಾಡಿಗೆ ನಡೆಸುವ ಬಸ್ಸು ಮಾರ್ಗಗಳು

೮೩೧ ಶ್ರೀ ಜೆ. ಎ. ಫರ್ನಾಂಡಿಸ್, (ನಾಮ ನಿರ್ದೇಶನ ಹೊಂದಿದವರು).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಂತರ ರಾಜ್ಯ ಮಾರ್ಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಓಡಿಸುತ್ತಿರುವ ಮಾರ್ಗಗಳೆಷ್ಟು ?

ಆ) ಬೆಂಗಳೂರಿನಿಂದ ತಮಿಳುನಾಡಿನ ವಿವಿಧ ಸ್ಥಳಗಳಿಗೆ ಓಡಿಸುತ್ತಿರುವ ಮಾರ್ಗಗಳೆಷ್ಟು ?

ಇ) ತಮಿಳುನಾಡು ಸಾರಿಗೆ ಸಂಸ್ಥೆಗಳು ಬೆಂಗಳೂರಿಗೆ ಓಡಿಸುತ್ತಿರುವ ಮಾರ್ಗಗಳು ಎಷ್ಟು ?

ಈ) ಅಂತರ ರಾಜ್ಯ ಸಾರಿಗೆ ಒಪ್ಪಂದವು ರಾಜ್ಯದ ಹಿತಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಇದೆಯೆಂಬುದು ನಿಜವೇ ?

ಉ) ಹಾಗಾದರೆ ಪ್ರತಿ ವರ್ಷದ ನಷ್ಟವೆಷ್ಟು ? ಮತ್ತು ಈ ರೀತಿಯ ವಿಕೃತ ಪರಿಸ್ಥಿತಿಯನ್ನು ಸಾರಿಗೆ ಸಂಸ್ಥೆಯು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಳಲ್ಲಿ ಮಾರ್ಗಗಳಲ್ಲಿ ಬಸ್ಸು ಓಡಿಸುತ್ತಿದೆ.

ಆ) ೨೧ ಮಾರ್ಗಗಳು

ಇ) ೧೦೨ ಮಾರ್ಗಗಳು.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ.

೮೫೨. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಸಮಾಜ ಕಲ್ಯಾಣ ಹಾಗೂ ಯುವಜನ ಸೇವೆ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ ಪ್ರಾರಂಭಿಸುವ ವಿಚಾರ ಸರ್ಕಾರದಲ್ಲಿ ದೆಯೇ ?

ಆ) ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ನಿರ್ಣಯ ಯಾವ ಹಂತದಲ್ಲಿದೆ ?

ಇ) ೧) ಕಲಘಟಗಿ ತಾಲ್ಲೂಕು ಚೆನ್ನ ಬಸವೇಶ್ವರ ಕಿರಿಯ ಮಹಾ ವಿದ್ಯಾಲಯ ಅರಳಿ ಕಟ್ಟಿ ತಾಲ್ಲೂಕು ಹುಬ್ಬಳ್ಳಿ, ಎಸ್. ಜಿ. ಆರ್ ಕಿರಿಯ ಮಹಾ ವಿದ್ಯಾಲಯ

೨) ಸೂಲಿ ತಾಲ್ಲೂಕು, ಹುಬ್ಬಳ್ಳಿ

೩) ವಿಶ್ವಕೋಟಿ ತಾಲ್ಲೂಕು ಕಲಘಟಗಿ

ಈ) ಮಂಜೂರಾದ ತಾ. ಕಲಘಟಗಿ, ಮೇಲ್ಕಾಣಿಸಿದ ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ನಿರ್ಣಯಗಳು ಯಾವ ಹಂತದಲ್ಲಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಮಾಜ ಕಲ್ಯಾಣ ಸಚಿವರು).—

ಅ) ಇದೆ

ಆ) ಪರಿಶೀಲನೆಯಲ್ಲಿದೆ.

ಇ) ಅರಳಿಕಟ್ಟಿ ಹಾಗೂ ಮಂಜೂರಾಗಿರುವ ೧೯೮೯–೯೦ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

ರೇಷ್ಮೆ ಇಲಾಖೆಯ ಕೆಲಸಗಾರರನ್ನು ಕ್ರಮಬದ್ಧಗೊಳಿಸುವಿಕೆ.

೯೦೦. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ ವ್ಯವಸಾಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಇಲಾಖೆಯಲ್ಲಿ ದಿನಗೂಲಿ ಕೆಲಸಗಾರರ ಸಂಖ್ಯೆ ?

ಆ) ಅವರ ಸೇವೆಯನ್ನು ಎಲ್ಲಿ ಸಕ್ರಮೀಕರಣ ಗೊಳಿಸಲಾಗುವುದು ?

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನಾ ಸಚಿವರು).—

ಅ) ೯೦೯.

ಆ) ಈ ವಿಷಯವನ್ನು ಸುಪ್ರೀಮ್‌ಕೋರ್ಟ್ ಆದೇಶ ಬಂದ ನಂತರ ಪರಿಶೀಲಿಸಲಾಗುವುದು.